ವಿಷಯ ತುರ್ತು ಪರಿಸ್ಥಿತಿಯಲ್ಲಿ ಕೆಡವಲಾದ ಮನೆಗಳಿಗೆ ಪರಿಹಾರ.

ಪ್ರ. 140 (107) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ತುರ್ತು ಪರಿಸ್ಥಿತಿಯಲ್ಲಿ ತೀರ್ಥಹಳ್ಳಿಯಲ್ಲಿ ರಸ್ತೆ ಅಗಲ ಮಾಡಲು ಕೆಡವಲಾದ ಮನೆ ಕಟ್ಟಡಗಳಿಗೆ ಪರಿಹಾರ ನೀಡಲು ಶಹಾಲಿಯೋಗರವರ ವರದಿಯ ಮೇರೆಗೆ ಇದುವರೆಗೆ ಎಷ್ಟು ಜನರಿಗೆ ಹಣ ನೀಡಲಾಗಿದೆ ಮತ್ತು ಅದರ ಮೊತ್ತವೆಷ್ಟು ;

(ಆ) ಇನ್ನೂ ಎಷ್ಟು ಜನರಿಗೆ ಪರಿಹಾರ ನೀಡಬೇಕಾಗಿದೆ; ಹಾಗೂ

(ಇ) ಯಾವಾಗ ನೀಡಲಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

(ಅ) ಒಟ್ಟು 32 ಜನರಿಗೆ 20,100.00 ರೂಗಳ ಪರಿಹಾರ ನೀಡಲಾಗಿದೆ.

(ಆ) ಇನ್ನು ಯಾರಿಗೂ ಪರಿಹಾರ ಕೊಡಬೇಕಾಗಿಲ್ಲ.

(ಇ) ಮೇಲಿನ 'ಅ' ನಲ್ಲಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ವಿ. ಐ. ಎಸ್.ಎಲ್. ಕಾರ್ಖಾನೆಯ ವ್ಯವಹಾರದ ಬಗ್ಗೆ.

ಪ್ರ. 141 (117) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಿಂದ 1·3 ಕೋಟಿ ರೂ ಬೆಲೆ ಬಾಳುವ ಉಕ್ಕನ್ನು ಫಲ್‌ಕಾರ್ ರೋಲಿಂಗ್ ಮಿಲ್‌ಗೂ, 60 ಲಕ್ಷ ರೂ ಮೌಲ್ಯದ ಉಕ್ಕನ್ನು ಸಿಂಗ್ವಿ ರೋಲಿಂಗ್ ಮಿಲ್‌ಗೂ ಮುಂಗಡವಿಲ್ಲದೆ ನೀಡಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಾರ್ಖಾನೆಯಲ್ಲಿ ಫೆರೋ ಸಿಲಿಕಾನ್ ಪ್ಲಾಂಟ್ ಭಸ್ಮವಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ. ನಷ್ಟವಾದ ಮೌಲ್ಯ ಎಷ್ಟು, ಹಾಗೂ ಇದಕ್ಕೆ ಹೊಣೆಗಾರರು ಯಾರು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ಬಂದಿದೆ.

(ಆ) ಫೆರೋಸಿಲಿಕಾನ್ ಪ್ಲಾಂಟ್ ಭಸ್ಮವಾಗಿಲ್ಲ. ಆದರೆ ಈ ಕುಲುಮೆಯ ತಳಭಾಗವು 7-3-1983 ರಂದು ಛಿದ್ರಗೊಂಡಿತು. ಸುಮಾರು 60,000 ರೂ. ಖರ್ಚು ಮಾಡಿ ಅದನ್ನು ರಿಪೇರಿ ಮಾಡಲಾಯಿತು. ಇದಕ್ಕೆ ಯಾರೂ ಹೊಣೆಗಾರರಲ್ಲ.

ವಿಷಯ : ವಿ. ಐ. ಎಸ್. ಎಲ್. ಆಡಳಿತ ವ್ಯವಹಾರ.

ಪ್ರ. 142 (116) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ವಿ.ಐ.ಎಸ್.ಎಲ್. ಹೊಸ ಬೀಡು ಕಬ್ಬಿಣದ ವಿದ್ಯುತ್ ಕುಲುಮೆಯ ತಯಾರಿಕಾ ಸಾಮರ್ಥ್ಯ (ಕೆಪ್ಯಾಸಿಟಿ) ದಿನನಿತ್ಯದ ಪ್ರಮಾಣ ಎಷ್ಟು ; ಆದರ ಪೂರ್ಣ ಸಾಮರ್ಥ್ಯದ ಉಪಯೋಗವಾಗುತ್ತಿಲ್ಲ ವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಲಕ್ಷಾಂತರ ರೂ. ಬೆಲೆ ಬಾಳುವ ರೈಲ್ವೆ ಎಂಜಿನ್ ತಿರುಗಿಸುವ ಟರ್ನ್‌ಟೇಬಲ್ ಉಪಯೋಗವಾಗುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಇ) ವಿ.ಐ.ಎಸ್.ಎಲ್. ಅಧಿಕಾರಿಗಳು ಆನೇಕ ಬಾರಿ (6 ತಿಂಗಳಿಗೊಮ್ಮೆ) ಹಣ್ಣಿನ ತರಬೇತಿಗೆಂದು ವಿದೇಶ ಯಾತ್ರೆ ನಡೆಸುತ್ತಾರೆ ಮತ್ತು ಇಂತಹ ಪರಣಿತರಿದ್ದರೂ ಕೋಟ್ಯಾಂತರ ರೂ. ನಷ್ಟವಾಗುವುದನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ದಿನಕ್ಕೆ ಸುಮಾರು 350 ಟನ್ನುಗಳು. ಈ ಕುಲುಮೆಗಳ ಉತ್ಪಾದನಾ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕೆ 1971 ನೇ ಸಾಲಿನಿಂದ ಶೇಕಡಾ 20 ರಿಂದ 80 ರವರೆಗೆ ವಿಧಿಸಿದ ವಿದ್ಯುತ್ ಕಡಿತವೇ ಕಾರಣ.

(ಆ) ಬಂದಿದೆ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಟ್ರಾಂವೇ ಇಲಾಖೆಯಲ್ಲಿ ಒಂದು ಅತೀ ಹಳೆಯದಾದ ರೈಲ್ವೇ ಎಂಜಿನ್ ತಿರುಗಿಸುವ ಟರ್ನ್‌ಟೇಬಲ್ ಇದ್ದಿತ್ತು. ಆದರೆ ವಿಶೇಷವಾದ ಯಾಂತ್ರಿಕ ಆಧುನೀಕರಣದಿಂದ ಅದು ಈಗ ಉಪಯೋಗಕ್ಕೆ ಬಾರದ ಕಾರಣ ಸ್ಕ್ರಾಪ್ ಆಗಿ ಪರಿವರ್ತಿಸಲಾಯಿತು.

(ಇ) ಕಾರ್ಖಾನೆಯ ಇಂಜಿನಿಯರ್‌ಗಳು ವಿದೇಶಕ್ಕೆ ಹೋಗಿ ತರಬೇತಿ ಪಡೆಯುವುದಕ್ಕೂ ಮತ್ತು ಕಂಪನಿಯು ಅನುಭವಿಸುತ್ತಿರುವ ನಷ್ಟಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ.